

ಗೊಕ್ ಸೊನ್ ದೇವಾಲಯದ ಪ್ರವೇಶದ್ವಾರ

ಧಾವಂತದ ಬದುಕಿನ ಭಾಗವಾದ ಯುವಜನತೆ ಆಧುನಿಕತೆಯನ್ನು ಪ್ರತಿನಿಧಿಸುವರು.

ಹನಾಯ್ ನಗರದಲ್ಲಿ ರಸ್ತೆ ಬದಿಯಲ್ಲಿ ವೈವಿಧ್ಯ ಖಾದ್ಯಗಳ ರುಚಿ ನೋಡುತ್ತಾ, ಮಾರಾಟಕ್ಕಿರುವ ತರತರಹದ ವಸ್ತುಗಳು, ಕಲಾಕೃತಿಗಳತ್ತ ನೋಡಿ ಬೆರಗಾಗುತ್ತಾ, ಇಲ್ಲಿನ ವಿಶೇಷ ಕೋಳಿಮೊಟ್ಟೆಯ ಕಾಫಿಯತ್ತ ಕೈಚಾಚುತ್ತಾ, ಸ್ಥಳೀಯರೊಂದಿಗೆ ಬೆರೆತು ಮಾತನಾಡಿ, ಇತಿಹಾಸದ ರಸಪಾಕದಲ್ಲಿ ಮಿಂದೆದ್ದಾಗ ಮಾತ್ರ ಚಲನಶೀಲ, ಜಾಗೃತ ಹನಾಯ್ ಕಣ್ತುಂಬಿಕೊಳ್ಳಲು ಸಾಧ್ಯ.

ಹನಾಯ್, ವ್ಯಾಪಾರಿಗಳ ತವರೂರು. ಇಲ್ಲಿ ಸುಂದರವಾದ Lacquer (ಮರ ಅಥವಾ ಲೋಹದ ಕಲಾಕೃತಿಗೆ ಮೆರುಗು) ಕಲೆಯಿಂದ ರೂಪುಗೊಂಡ ಕಲಾಕೃತಿಗಳು ಸಿಗುತ್ತವೆ. ಅರಗಿನ ಹೊಳಪಿನಿಂದ ಕೂಡಿದ ಚಿತ್ರಗಳು, ಡಬ್ಬಗಳು, ವಾಸ್, ಇತ್ಯಾದಿ ಕಲಾಕೃತಿಗಳು ಹಾಗೂ ಸಿದ್ಧ ಉಡುಪುಗಳು ಇಲ್ಲಿನ ವಿಶೇಷ. ಹನಾಯ್ ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ನಗರ. ಇಲ್ಲೀಗ ನೂರು ಮೀಟರ್ ಎತ್ತರದ ನೂರಕ್ಕೂ ಹೆಚ್ಚು ಗಗನಚುಂಬಿ ಕಟ್ಟಡಗಳಿವೆ.

## ಭಾರತದ ಅಂಚೆಚೀಟಿಯಲ್ಲಿ ವಿಯೆಟ್ನಾಂ

ಉತ್ತರ ವಿಯೆಟ್ನಾಂನ ಕೆಂಪು ನದಿ ಮುಖಜ ಭೂಮಿ ವಲಯವನ್ನು 'ದೊಂಗ್ ಬಂಗ್ ಸೊಂಗ್ ಹೊಂಗ್' ಎಂದು ಕರೆಯುವರು.




ಸುಮಾರು 15 ಸಾವಿರ ಚ.ಕಿ.ಮೀ. ವಿಸ್ತಾರದ ಈ ವಲಯದಲ್ಲಿ ಎಂಟು ಪ್ರಾಂತ್ಯಗಳು ಮತ್ತು ಎರಡು ಮುನಿಸಿಪಾಲಿಟಿಗಳು ಇವೆ. ಹನಾಯ್ ಈ ವಲಯದ ಪ್ರಮುಖ ವ್ಯಾಪಾರಿ ಹಾಗೂ ಪ್ರವಾಸಿ ಕೇಂದ್ರ. ನಿನ್ ಬಿನ್ ಪ್ರಾಂತ್ಯದ ಫೋ ಮಿನ್ ಪಗೋಡ, ಲೈ ರಾಜವಂಶದವರಿಂದ (1009–1225) ನಿರ್ಮಾಣವಾಗಿದೆ. 14 ಅಂತಸ್ತುಗಳ 20 ಮೀಟರ್ ಎತ್ತರದ ಈ ಪಗೋಡದ ಮೇಲೆ ಹೂಗಳು, ಅಲೆಗಳು ಮತ್ತು ಮೋಡಗಳ ರೂಪಗಳನ್ನು ಕೆತ್ತಲಾಗಿದೆ. 2018ರಲ್ಲಿ ಭಾರತ ಮತ್ತು ವಿಯೆಟ್ನಾಂ ಜಂಟಿಯಾಗಿ ಎರಡೂ ರಾಷ್ಟ್ರಗಳ ವಾಸ್ತುಶಿಲ್ಪಗಳನ್ನೊಳಗೊಂಡ ಅಂಚೆಚೀಟಿಯನ್ನು ಬಿಡುಗಡೆ ಮಾಡಿದವು. ಈ ಅಂಚೆಚೀಟಿಯಲ್ಲಿ ಭಾರತದ ಬೌದ್ಧ ಸ್ಮಾರಕ ಸಾಂಚಿ ಸ್ತೂಪ ಮತ್ತು ವಿಯೆಟ್ನಾಂನ ಫೋ ಮಿನ್ ಪಗೋಡ ಚಿತ್ರಗಳಿವೆ.

## ಸಾಂಸ್ಕೃತಿಕ ರಾಜಧಾನಿ

71 ಲಕ್ಷ ಜನಸಂಖ್ಯೆಯಿರುವ ಹನಾಯ್, ಸೈಗಾನ್ ನಂತರ ಎರಡನೇ ದೊಡ್ಡ ನಗರ. ವಿಯೆಟ್ನಾಂ ದೇಶದ ಉತ್ತರ ಭಾಗದಲ್ಲಿ ಕೆಂಪು ನದಿ ದಂಡೆಯ ಮೇಲಿರುವ ಹನಾಯ್ ಪೂರ್ವದಲ್ಲಿ ಹಾಂಗ್ ಕಾಂಗ್ ಇದೆ. ಚೀನಾದ ಗಡಿ ಸಮೀಪದಲ್ಲಿದೆ. ಹೀಗಾಗಿ ಉತ್ತರ ವಿಯೆಟ್ನಾಂನ ರಾಜಕೀಯ, ಸಾಮಾಜಿಕ, ವ್ಯಾಪಾರ ವಹಿವಾಟು, ಉದ್ಯೋಗದ ಮೇಲೆ ಚೀನಾ ಪ್ರಭಾವ ಹೆಚ್ಚಿದೆ. ಸುಮಾರು ಒಂದು ಸಾವಿರ ವರ್ಷಗಳ ಕಾಲ ಅಂದರೆ 9–10ನೇ ಶತಮಾನದವರೆಗೆ ವಿಯೆಟ್ನಾಂ ಚೀನಾ ಆಡಳಿತಕ್ಕೆ ಒಳಪಟ್ಟಿತ್ತು. ಸುಮಾರು 3000 ವರ್ಷಗಳಷ್ಟು ಇತಿಹಾಸವಿರುವ ಈ ನಗರದಲ್ಲಿ ಲೈ ವಂಶ, ಮಿಂಗ್ ವಂಶ, ಎಂಗುಯೆನ್ ವಂಶದ ಅರಸರು ಆಳ್ವಿಕೆ ನಡೆಸಿದ್ದಾರೆ. ನಂತರ ಫ್ರೆಂಚರು ಕೂಡ ಆಳ್ವಿಕೆ ನಡೆಸಿದರು. ಫ್ರೆಂಚ್ ಆಳ್ವಿಕೆಯಲ್ಲಿ ಇಂಡೊ–ಚೀನಾ ವೈದ್ಯಕೀಯ ಕಾಲೇಜು (1902),




ನೋನ್ ಲಾ ಎಂದು ಕರೆಯುವ ವಿಯೆಟ್ನಾಮಿ ಟೊಪ್ಪಿ ಧರಿಸಿ ಹಣ್ಣುಗಳನ್ನು ಮಾರುತ್ತಿದ್ದ ಮಹಿಳೆ